ಜಿಲ್ಲಾ ಪಂಚಾಯತ್, ಕೋಲಾರ.
ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಎಸ್.ಎನ್.ಆರ್. ಆಸ್ಪತ್ರೆ ಆವರಣ, ಕೋಲಾರ-563101.
Email.ID: dao.kolar09@gmail.com Ph: 08152-200025

ಆಯುಷ್/ಕೋ/08/2021-22(ಭಾಗ-1) ದಿನಾಂಕ: 18-07-2026

ಗೆ,

ಮಾನ್ಯ ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ,
ಕೋಲಾರ.

ಮಾನ್ಯರೇ,

**ವಿಷಯ** : ರಾಷ್ಟ್ರೀಯ ಆಯುಷ್ ಅಭಿಯಾನದಡಿ ಖಾಲಿಯಿರುವ ಒಂದು ಹೋಮಿಯೋಪತಿ ತಜ್ಞ ವೈದ್ಯರು ಹಾಗೂ ಒಂದು ಆಯುರ್ವೇದ ತಜ್ಞ ವೈದ್ಯರ ಹುದ್ದೆಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡುವ ಬಗ್ಗೆ.

**ಉಲ್ಲೇಖ** : ಈ ಕಛೇರಿಯ ಇದೇ ಸಮಸಂಖ್ಯೆಯ ಅಧಿಸೂಚನೆ ದಿ : 18-07-2026.

*** ** ***

ಕೋಲಾರ ಜಿಲ್ಲಾ ಆಯುಷ್ ಇಲಾಖೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಆಯುಷ್ ಅಭಿಯಾನದಡಿ ಖಾಲಿಯಿರುವ ಒಂದು ಹೋಮಿಯೋಪತಿ ತಜ್ಞ ವೈದ್ಯರು ಹಾಗೂ ಒಂದು ಆಯುರ್ವೇದ ತಜ್ಞ ವೈದ್ಯರ ಹುದ್ದೆಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಉಲ್ಲೇಖಿತದಲ್ಲಿ ಹೊರಡಿಸಿರುವ ಅಧಿಸೂಚನೆಯನ್ನು ಹಾಗೂ ಈ ನೇಮಕಾತಿಗಾಗಿ ಸಲ್ಲಿಸಬೇಕಾಗಿರುವ ಅರ್ಜಿಯನ್ನು https://kolar.nic.in/en/notice_category/recruitments/ ಮುಖಾಂತರ ಅಪ್‌ಲೋಡ್ ಮಾಡಲು ಅನುಮತಿ ನೀಡಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

1. ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ : 20-07-2026.
2. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 20-08-2026.

ತಮ್ಮ ವಿಶ್ವಾಸಿ,

ಜಿಲ್ಲಾ ಆಯುಷ್ ಅಧಿಕಾರಿಗಳು(ಪ್ರ),
ಕೋಲಾರ.

ಜಿಲ್ಲಾ ಆಯುಷ್ ಅಧಿಕಾರಿ
ಜಿಲ್ಲಾ ಆಯುಷ್ ಕಛೇರಿ
ಕೋಲಾರ

ಜಿಲ್ಲಾ ಪಂಚಾಯತ್, ಕೋಲಾರ.

ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಎಸ್.ಎನ್.ಆರ್. ಆಸ್ಪತ್ರೆ ಆವರಣ, ಕೋಲಾರ-563101.

Email.ID: dao.kolar09@gmail.com Ph: 08152-200025

ಆಯುಷ್/ಕೋ/08/2021-22(ಭಾಗ-1) ದಿನಾಂಕ: 18-07-2026

## ಅಧಿಸೂಚನೆ

ಕೋಲಾರ ಜಿಲ್ಲಾ ಆಯುಷ್ ಕಛೇರಿ ವ್ಯಾಪ್ತಿಯಲ್ಲಿ ಬರುವ ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ಮೇಲ್ದರ್ಜೆಗೇರಿಸಲಾದ ಕೆಳಕಂಡ ಆಯುಷ್ ಆಸ್ಪತ್ರೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಖಾಲಿ ಇರುವ ತಜ್ಞ ವೈದ್ಯರ ಹುದ್ದೆಗಳನ್ನು ಸಂಪೂರ್ಣ ತಾತ್ಕಾಲಿಕವಾಗಿ ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

| ಕ್ರ.ಸ | ತಜ್ಞ ವೈದ್ಯರ ಹುದ್ದೆ ಖಾಲಿ ಇರುವ ಆಸ್ಪತ್ರೆಯ ಹೆಸರು | ಹುದ್ದೆಗಳ ಪದನಾಮ | ಹುದ್ದೆಗಳ ಸಂಖ್ಯೆ | ನಿಗದಿಪಡಿಸಿರುವ ಮೀಸಲಾತಿ (ಲಂಬ) | ಸಮತಳ ಮೀಸಲಾತಿ | ಮಾಹೆಯಾನ ಸಂಚಿತ ವೇತನ | ಕನಿಷ್ಠ ವಿದ್ಯಾರ್ಹತೆ |
|---|---|---|---|---|---|---|---|
| 01 | ಸರ್ಕಾರಿ ಹೋಮಿಯೋಪತಿ ಆಸ್ಪತ್ರೆ, ಕೋಲಾರ | ಹೋಮಿಯೋಪತಿ ತಜ್ಞ ವೈದ್ಯರು | 01 | ಪರಿಶಿಷ್ಟ ಪಂಗಡ | ಇತರೆ ಅಭ್ಯರ್ಥಿ | ರೂ.52,550/- + 5,000 (PG allowance) | MS/MD ಸ್ನಾತಕೋತ್ತರ ಪದವಿ ಹೊಂದಿರತಕ್ಕದ್ದು, ಸ್ನಾತಕೋತ್ತರ ಪದವೀಧರರು ಲಭ್ಯವಿಲ್ಲದಿದ್ದರೆ, ಕನಿಷ್ಠ 3 ವರ್ಷಗಳ ಅನುಭವದೊಂದಿಗೆ, PG Allowance ರಹಿತವಾಗಿ BHMS ಪದವಿಯನ್ನು ಪರಿಗಣಿಸಲಾಗುವುದು. |
| 02 | ಸರ್ಕಾರಿ ಆಯುರ್ವೇದ ಆಸ್ಪತ್ರೆ, ಶ್ರೀನಿವಾಸಪುರ | ಆಯುರ್ವೇದ ತಜ್ಞ ವೈದ್ಯರು | 01 | ಸಾಮಾನ್ಯ | ಸಾಮಾನ್ಯ ಅಭ್ಯರ್ಥಿ | ರೂ.52,550/- + 5,000 (PG allowance) | MS in ಶಲ್ಯ ತಂತ್ರ ಅಥವಾ MD in ಪಂಚಕರ್ಮ /ಕಾಯಚಿಕಿತ್ಸಾ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಹೊಂದಿರಬೇಕು. |

### ನೇಮಕಾತಿಯು ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

1. ಗುತ್ತಿಗೆ ನೇಮಕಾತಿಯು ಸಂಪೂರ್ಣ ತಾತ್ಕಾಲಿಕವಾಗಿದ್ದು, ದಿನಾಂಕ : 31-03-2027 ಕ್ಕೆ ಅಂತ್ಯಗೊಳ್ಳುತ್ತದೆ. ಆರ್ಥಿಕ ವರ್ಷ ಕೊನೆಯ ದಿನ ಮುಕ್ತಾಯವಾದ ನಂತರ ಒಂದು ದಿನ ವಿರಾಮ (Break) ನೀಡಿ ತರುವಾಯ ಮುಂದಿನ ಆರ್ಥಿಕ ವರ್ಷದ ಕೊನೆಯ ದಿನಾಂಕದವರೆಗೆ ಗುತ್ತಿಗೆ ಸೇವೆಯನ್ನು ಮುಂದುವರೆಸುವ ಬಗ್ಗೆ ಆಯುಷ್ ನಿರ್ದೇಶನಾಲಯ ಹಾಗೂ ಜಿಲ್ಲಾ ಆಯುಷ್ ಸಮಿತಿಯು ನಿರ್ಣಯಿಸಿದಂತೆ ಕ್ರಮಕೈಗೊಳ್ಳಲಾಗುವುದು.
2. ವಯೋಮಿತಿಯು ಅರ್ಜಿ ಸಲ್ಲಿಸುವ ದಿನಾಂಕಕ್ಕೆ ಕನಿಷ್ಟ 18 ವರ್ಷಗಳು ತುಂಬಿರತಕ್ಕದ್ದು, ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 262 ಸೇನೆನಿ 2025, ದಿನಾಂಕ : 29-01-2026 ರಲ್ಲಿ ಜಾರಿ ಮಾಡಿರುವ ಆದೇಶದಲ್ಲಿ ಎಲ್ಲಾ ಪ್ರವರ್ಗಗಳಿಗೆ ಒಂದು ಬಾರಿಗೆ ಅನ್ವಯವಾಗುವಂತೆ ವಯೋಮಿತಿಯಲ್ಲಿ 05 ವರ್ಷಗಳ ಸಡಿಲಿಕೆಯನ್ನು ನೀಡಲಾಗಿದೆ. ಅದನ್ನು ಅಳವಡಿಸಿಕೊಂಡ ನಂತರ ಅಭ್ಯರ್ಥಿಗಳು ಈ ಕೆಳಕಂಡ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು.

| | |
|---|---|
| ಸಾಮಾನ್ಯ ಅಭ್ಯರ್ಥಿಗಳಿಗೆ | ಗರಿಷ್ಠ 40 ವರ್ಷಗಳು, |
| ಪ್ರವರ್ಗ 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳಿಗೆ | ಗರಿಷ್ಠ 43 ವರ್ಷಗಳು, |
| ಪ.ಜಾ, ಪ.ಪಂ ಮತ್ತು ಪ್ರವರ್ಗ-1 ರ ಅಭ್ಯರ್ಥಿಗಳಿಗೆ | ಗರಿಷ್ಠ 45 ವರ್ಷಗಳು, |

ಅಂಗವಿಕಲ ಅಭ್ಯರ್ಥಿ ಅಥವಾ ವಿಧವೆಯಾಗಿದ್ದಲ್ಲಿ 10 ವರ್ಷಗಳು ವಯೋಮಿತಿ ಸಡಿಲಿಕೆ. (ನಿಯಮಗಳು ಅನ್ವಯ)

3. ಜಿಲ್ಲಾ ಆಯುಷ್ ಸಮಿತಿಯ ಸಂದರ್ಶನಕ್ಕೆ ಹಾಜರಾಗುವ ಮುನ್ನ ವಿದ್ಯಾರ್ಹತೆ/ಮೀಸಲಾತಿ/ವಯಸ್ಸು/ವಾಸಸ್ಥಳ/ ವಾರ್ಷಿಕ ಆದಾಯ ಸಮಿತಿಯು ಕೋರುವ ಇತರೆ ಮೂಲ ದಾಖಲೆಗಳನ್ನು ಹಾಜರುಪಡಿಸುವುದು.
4. ಕೇಂದ್ರ ಸ್ಥಾನದಲ್ಲಿ ತಂಗಿದ್ದು 24 ಗಂಟೆಗಳಲ್ಲೂ ಯಾವುದೇ ತುರ್ತು ಸೇವೆಗೆ ಲಭ್ಯವಿದ್ದು, ಸೇವೆ ಸಲ್ಲಿಸುವ ಷರತ್ತಿಗೆ ಒಳಪಟ್ಟಿರಬೇಕು.
5. ತೃಪ್ತಿಕರವಾದ ಕರ್ತವ್ಯ ನಿರ್ವಹಣೆ ಷರತ್ತಿಗೆ ಒಳಪಟ್ಟು ಪ್ರತಿ ತಿಂಗಳು ಸಂಚಿತ ಮೊತ್ತವನ್ನು ಮಾತ್ರ ನೀಡಲಾಗುವುದು.
6. ಗುತ್ತಿಗೆ ಆಧಾರದ ತಾತ್ಕಾಲಿಕ ನೇಮಕಾತಿಯನ್ನು ಯಾವುದೇ ಸಮಯದಲ್ಲಿ ಕಾರಣವಿಲ್ಲದೇ ಅಥವಾ ಸರ್ಕಾರ, ಉಭಯ ಪಕ್ಷಗಳು ಒಂದು ತಿಂಗಳ ನೋಟೀಸು ಕೊಟ್ಟು ಸೇವೆಯನ್ನು ಪರ್ಯವಸನಗೊಳಿಸುವ ಷರತ್ತಿಗೊಳಪಟ್ಟಿರುತ್ತದೆ.
7. ಅಭ್ಯರ್ಥಿಗಳು ದುರ್ನಡತೆಯಿಂದಾಗಿ ಸರ್ಕಾರಕ್ಕೆ ಆರ್ಥಿಕ & ಇನ್ನಿತರೆ ನಷ್ಟ ಉಂಟಾದಲ್ಲಿ ಅದನ್ನು ಅವರುಗಳೇ ಸರ್ಕಾರಕ್ಕೆ ತುಂಬಿ ಕೊಡುವುದು.
8. ಖಾಯಂ ನೇಮಕಾತಿಗಾಗಲೀ, ವಿಶ್ರಾಂತಿ ವೇತನಕ್ಕಾಗಲೀ, ನಿವೃತ್ತಿ ಉಪದಾನಕ್ಕಾಗಲೀ, ವೇತನ ಶ್ರೇಣಿಗಾಗಲೀ ಅಥವಾ ಯಾವುದೇ ಭತ್ಯೆಗಳನ್ನು ಪಡೆಯುವ ಹಕ್ಕನ್ನು ಹೊಂದಿರುವುದಿಲ್ಲ.
9. ಗುತ್ತಿಗೆ ಆಧಾರದ ತಾತ್ಕಾಲಿಕ ನೇಮಕಾತಿಯು ನಿರ್ದಿಷ್ಟ ಆಸ್ಪತ್ರೆಗೆ ಆಗಿರುವುದರಿಂದ ಯಾವುದೇ ಇತರೆ ಆಸ್ಪತ್ರೆಗಾಗಲೀ/ಚಿಕಿತ್ಸಾಲಯಕ್ಕಾಗಲೀ ಅಥವಾ ಬೇರೆ ಜಿಲ್ಲೆಗೆ ವರ್ಗಾವಣೆ ಅಥವಾ ಪ್ರತಿ ನಿಯೋಜನೆ ಪಡೆಯಲು ಅವಕಾಶವಿರುವುದಿಲ್ಲ.
10. ಅಪೂರ್ಣ ಅರ್ಜಿಗಳು ಹಾಗೂ ಅವಧಿ ಮೀರಿ ಬರುವ ಅರ್ಜಿಗಳನ್ನು ಯಾವುದೇ ಸೂಚನೆ ನೀಡದೇ ತಿರಸ್ಕರಿಸಲಾಗುವುದು. ಅರ್ಜಿದಾರರ ವಾಸಸ್ಥಳದ ಬಗ್ಗೆ ಸಂಬಂಧಿಸಿದ ನಗರಪಾಲಿಕೆ/ತಹಶೀಲ್ದಾರರಿಂದ ಪಡೆದ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
11. ತಾತ್ಕಾಲಿಕ ನೇರ ಗುತ್ತಿಗೆ ಹುದ್ದೆಗಳು ಆಯುಷ್ ನಿರ್ದೇಶನಾಲಯವು ಕಾಲ ಕಾಲಕ್ಕೆ ಹೊರಡಿಸುವ ಆದೇಶಗಳಿಗೆ ಒಳಪಟ್ಟಿರುತ್ತದೆ.
12. ಮೇಲೆ ತಿಳಿಸಿರುವ ಹುದ್ದೆಗಳನ್ನು ಮೆರಿಟ್, ಅನುಭವ ಹಾಗೂ ಸಂದರ್ಶನದ (ಕ್ರಮವಾಗಿ 70%, 20%, 10%) ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುವುದು.
13. ತಜ್ಞ ವೈದ್ಯರ ಹುದ್ದೆಗೆ ಪದವಿಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಮೆರಿಟ್ ಲಿಸ್ಟ್ ತಯಾರಿಸಲಾಗುವುದು.
14. ಅಭ್ಯರ್ಥಿಯು ಅರ್ಜಿಯೊಂದಿಗೆ ವಿದ್ಯಾರ್ಹತೆ/ಮೀಸಲಾತಿ/ವಯಸ್ಸು/ವಾಸಸ್ಥಳದ ಪ್ರತಿಗಳನ್ನು ಹಾಗೂ ಎರಡು ಪಾಸ್‌ಪೋರ್ಟ್ ಸೈಜಿನ ಫೋಟೋಗಳನ್ನು ಲಗತ್ತಿಸುವುದು.
15. ಭರ್ತಿ ಮಾಡಿದ ಅರ್ಜಿಗಳನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವುದು.
16. ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ : 20-07-2026 ಮತ್ತು ಕೊನೆ ದಿನಾಂಕ : 20-08-2026.
17. ಅರ್ಜಿಗಳನ್ನು **https://kolar.nic.in/en/notice_category/recruitments/** ನಲ್ಲಿ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿಗಳನ್ನು ಜಿಲ್ಲಾ ಆಯುಷ್ ಅಧಿಕಾರಿಗಳು, ಜಿಲ್ಲಾ ಆಯುಷ್ ಕಛೇರಿ, ಎಸ್.ಎನ್.ಆರ್ ಆಸ್ಪತ್ರೆ ಆವರಣ, ಕೋಲಾರ-563101 ಇಲ್ಲಿಗೆ ಕಛೇರಿ ಅವಧಿಯಲ್ಲಿ ಖುದ್ದಾಗಿ ಅಥವಾ ನೊಂದಾಯಿತ ಅಂಚೆ ಮೂಲಕ ನಿಗದಿತ ದಿನಾಂಕದೊಳಗೆ ಸಲ್ಲಿಸತಕ್ಕದ್ದು, ಕೊನೆಯ ದಿನಾಂಕ ನಂತರ ಸ್ವೀಕೃತಗೊಂಡ ಅರ್ಜಿಗಳನ್ನು ಪರಿಗಣಿಸುವುದಿಲ್ಲ. ಒಂದು ವೇಳೆ ಕೊನೆಯ ದಿನಾಂಕದಂದು ಸರ್ಕಾರಿ ರಜೆಯೆಂದು ಘೋಷಿಸಲ್ಪಟ್ಟಲ್ಲಿ ಮರುದಿನವನ್ನು ಅಂತಿಮ ದಿನಾಂಕವೆಂದು ಪರಿಗಣಿಸಲಾಗುತ್ತದೆ.

ಜಿಲ್ಲಾ ಆಯುಷ್ ಅಧಿಕಾರಿಗಳು(ಪ್ರ),
ಕೋಲಾರ.

ಜಿಲ್ಲಾ ಆಯುಷ್ ಅಧಿಕಾರಿಗಳು,
ಜಿಲ್ಲಾ ಆಯುಷ್ ಕಛೇರಿ
ಕೋಲಾರ.

## ರಾಷ್ಟ್ರೀಯ ಆಯುಷ್ ಅಭಿಯಾನದ ಯೋಜನೆ

**ಕೋಲಾರ ಜಿಲ್ಲಾ ಆಯುಷ್ ಕಛೇರಿಯ ಅಧಿಸೂಚನೆ ಸಂಖ್ಯೆ: ಆಯುಷ್/ಕೋ/08/2021-22(ಭಾಗ-1), ದಿನಾಂಕ: 18-07-2026 ರಲ್ಲಿ ಆಹ್ವಾನಿಸಿರುವ ಗುತ್ತಿಗೆ ಆಧಾರದ ಆಯುರ್ವೇದ/ಹೋಮಿಯೋಪತಿ ತಜ್ಞ ವೈದ್ಯರ ಹುದ್ದೆಯ ನೇಮಕಾತಿಗಾಗಿ ಅರ್ಜಿ**

ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ (ಸಹಿಯೊಂದಿಗೆ)

| | | | | | |
|---|---|---|---|---|---|
| 1 | ಅಭ್ಯರ್ಥಿಯ ಹೆಸರು(ಬಿಡಿ ಅಕ್ಷರಗಳಲ್ಲಿ) | | | | |
| 2 | ತಂದೆ/ತಾಯಿಯ ಹೆಸರು | | | | |
| 3 | ಹುಟ್ಟಿದ ದಿನಾಂಕ (ಅಕ್ಷರಗಳಲ್ಲಿ) ಮತ್ತು ವಯಸ್ಸು (ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯ ಪ್ರತಿ ಲಗತ್ತಿಸುವುದು) | | | | |
| 4 | ಲಿಂಗ : ಸ್ತ್ರೀಲಿಂಗ/ಪುಲ್ಲಿಂಗ | | | | |
| 5 | ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ, ಪಡೆದ ಅಂಕಗಳು ಹಾಗೂ ಶೇಕಡವಾರು (ದಾಖಲಾತಿ ಪ್ರತಿಗಳೊಂದಿಗೆ) | | ಗರಿಷ್ಠ ಅಂಕ | ಪಡೆದ ಅಂಕ | ಶೇಕಡವಾರು |
| | | | | | |
| 6 | ಅಂಚೆ ವಿಳಾಸ | | | | |
| 7 | ಖಾಯಂ ವಿಳಾಸ ( ಸಂಬಂಧಿಸಿದ ಪ್ರಾಧಿಕಾರದಿಂದ ಪಡೆದ ದೃಢೀಕರಣದ ಪ್ರತಿ ಹಾಗೂ ಆಧಾರ್ ಪ್ರತಿ ಲಗತ್ತಿಸುವುದು) | | | | |
| 8 | ಮೀಸಲಾತಿ (ಒಳ ಮೀಸಲಾತಿಯನ್ನೊಳಗೊಂಡಂತೆ ದಾಖಲೆ ಪ್ರತಿ ಲಗತ್ತಿಸುವುದು) | | | | |
| 9 | ಇ-ಮೇಲ್ ಐಡಿ ಸಂಖ್ಯೆ | | | | |
| 10 | ದೂರವಾಣಿ/ಮೊಬೈಲ್ ಸಂಖ್ಯೆ | | | | |

| | | |
|---|---|---|
| 11 | ಹುದ್ದೆಗೆ ನಿಗದಿಪಡಿಸಿರುವ ಅನುಭವದ ವಿವರ (ಸರ್ಕಾರದಿಂದ ನೊಂದಣಿ ಹೊಂದಿರುವ ಹೋಮಿಯೋಪತಿ ಆಸ್ಪತ್ರೆ/ಚಿಕಿತ್ಸಾಲಯಗಳಲ್ಲಿ ಕಾರ್ಯನಿರ್ವಹಿಸಿದ ಅನುಭವವನ್ನು ಮಾತ್ರ ಪರಿಗಣಿಸಲಾಗುವುದು. (ದಾಖಲೆಯ ಪ್ರತಿ ಒದಗಿಸುವುದು) | |

ಮೇಲೆ ತಿಳಿಸಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆಂದು ಪ್ರಮಾಣೀಕರಿಸುತ್ತೇನೆ. ಇದರಲ್ಲಿ ಯಾವುದಾದರೂ ತಪ್ಪು/ಸುಳ್ಳು ಮಾಹಿತಿ ನೀಡಿದ್ದಲ್ಲಿ ಆಯ್ಕೆ ಸಮಿತಿ ತೆಗೆದುಕೊಳ್ಳುವ ನಿರ್ಧಾರಕ್ಕೆ ನಾನು ಬದ್ಧನಾಗಿರುತ್ತೇನೆ.

ದಿನಾಂಕ :

ಅಭ್ಯರ್ಥಿಯ ಸಹಿ/-

ಸ್ಥಳ :

# ಆಯುರ್ವೇದ/ಹೋಮಿಯೋಪತಿ ತಜ್ಞ ವೈದ್ಯರ ಹುದ್ದೆಗೆ

| ಕ್ರ.ಸ | ವಿದ್ಯಾರ್ಹತೆ | ವಿಷಯ | ತೇರ್ಗಡೆ ಹೊಂದಿದ ವರ್ಷ | ಅಂಕಗಳು | | ಶೇಕಡವಾರು |
|---|---|---|---|---|---|---|
| | | | | ಗರಿಷ್ಠ ಅಂಕ | ಪಡೆದ ಅಂಕ | |
| | | ಮೊದಲನೇ ವರ್ಷ | | | | |
| | | ಎರಡನೇ ವರ್ಷ | | | | |
| | | ಮೂರನೇ ವರ್ಷ | | | | |
| | | ನಾಲ್ಕನೇ ವರ್ಷ | | | | |
| | | ಐದನೇ ವರ್ಷ | | | | |
| | | ಸ್ನಾತ್ತಕೋತ್ತರ ಪದವಿ | | | | |

ದಿನಾಂಕ :

ಸ್ಥಳ :

ಅಭ್ಯರ್ಥಿಯ ಸಹಿ/-

ಜಿಲ್ಲಾ ಪಂಚಾಯತ್, ಕೋಲಾರ.
ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಎಸ್.ಎನ್.ಆರ್. ಆಸ್ಪತ್ರೆ ಆವರಣ, ಕೋಲಾರ– 563 101.
E-Mail: dao.kolar09@gmail.com, Phone NO :08152-220025

ಸಂಖ್ಯೆ: ಆಯುಷ್/ಕೋ/08/2021–22(ಭಾಗ-1), ದಿನಾಂಕ: 24–07–2026.

**ತಿದ್ದುಪಡಿ ಆದೇಶ**

ಕೋಲಾರ ಜಿಲ್ಲಾ ಆಯುಷ್ ಕಛೇರಿ ವ್ಯಾಪ್ತಿಯಲ್ಲಿ ಬರುವ ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ಮೇಲ್ದರ್ಜೆಗೇರಿಸಲಾದ ಆಯುಷ್ ಆಸ್ಪತ್ರೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಖಾಲಿ ಇರುವ ತಜ್ಞ ವೈದ್ಯರ ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲು ಅಧಿಸೂಚನೆ ಸಂಖ್ಯೆ : ಆಯುಷ್/ಕೋ/08/2021-22(ಭಾಗ-1), ದಿನಾಂಕ : 18-07-2026 ರ ಹೊರಡಿಸಲಾಗಿತ್ತು. ಸದರಿ ಅಧಿಸೂಚನೆಯ ಅರ್ಜಿ ಕ್ರಮ ಸಂಖ್ಯೆ 11 ರಲ್ಲಿ "ಹುದ್ದೆಗೆ ನಿಗದಿಪಡಿಸಿರುವ ಅನುಭವದ ವಿವರ (ಸರ್ಕಾರದಿಂದ ನೊಂದಣಿ ಹೊಂದಿರುವ ಹೋಮಿಯೋಪತಿ ಆಸ್ಪತ್ರೆ/ಚಿಕಿತ್ಸಾಲಯಗಳಲ್ಲಿ ಕಾರ್ಯನಿರ್ವಹಿಸಿದ ಅನುಭವವನ್ನು ಮಾತ್ರ ಪರಿಗಣಿಸಲಾಗುವುದು. (ದಾಖಲೆಯ ಪ್ರತಿ ಒದಗಿಸುವುದು)" ಎಂದು ಇದ್ದು ಇದನ್ನು "ಹುದ್ದೆಗೆ ನಿಗದಿಪಡಿಸಿರುವ ಅನುಭವದ ವಿವರ (ಸರ್ಕಾರದಿಂದ ನೊಂದಣಿ ಹೊಂದಿರುವ ಆಯುರ್ವೇದ/ಹೋಮಿಯೋಪತಿ ಆಸ್ಪತ್ರೆ/ಚಿಕಿತ್ಸಾಲಯಗಳಲ್ಲಿ ಕಾರ್ಯನಿರ್ವಹಿಸಿದ ಅನುಭವವನ್ನು ಮಾತ್ರ ಪರಿಗಣಿಸಲಾಗುವುದು. (ದಾಖಲೆಯ ಪ್ರತಿ ಒದಗಿಸುವುದು)" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಆಯುರ್ವೇದ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಅರ್ಜಿಯ ಕ್ರಮ ಸಂಖ್ಯೆ 11 ರಲ್ಲಿ ತಿಳಿಸಿರುವಂತೆ ಆಯುರ್ವೇದ ಎಂದು ಪರಿಗಣಿಸಿಕೊಂಡು ಅರ್ಜಿ ಸಲ್ಲಿಸತಕ್ಕದ್ದು.

ಜಿಲ್ಲಾ ಆಯುಷ್ ಅಧಿಕಾರಿಗಳು,
ಕೋಲಾರ.